ಓ ಎಸ್ ನಂ.70/2022

ಡಿ.ಡಬ್ಲ್ಯೂ-1 ಸಹದೇವಪ್ಪ ತಂದೆ ಕಾಶೀರಾಯ

(ಇಂದು ದಿನಾಂಕಃ 04-12-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.)

ಮುಂದುವರೆದ ಪಾಟೀ ಸವಾಲುಃ ಶ್ರೀ ಎ ಎಸ್ ಕೆ ವಕೀಲರಿಂದ.

ನನ್ನ ತಾತ ಸಹದೇವಪ್ಪರವರು ಮೃತರಾದ ನಂತರ ಅವರ ಹೆಸರನ್ನು ನನಗೆ ಇಟ್ಟಿರುತ್ತಾರೆ ಎಂದರೆ ಸರಿ. ನನ್ನ ತಾತ ಯಾವಾಗ ಮೃತರಾಗಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ದಾವಾ ಆಸ್ತಿಯ ಕುರಿತು ಮೊದಲು ಯಾರು ಅಪೀಲ್ ಮಾಡಿದ್ದರು ಎಂದು ನನಗೆ ಗೊತ್ತಿಲ್ಲ. ಸರ್ವೆ ನಂಬರ ೭೭ ಮತ್ತು ಸರ್ವೆ ನಂಬರ ೭೮ ರ ಜಮೀನುಗಳ ಮದ್ಯದಲ್ಲಿ ಚೌಡಾಪೂರದಿಂದ ಸ್ಟೇಷನ್ ಗಾಣಗಾಪೂರ ರಸ್ತೆ ಹೋಗಿರುತ್ತದೆ ಎಂದರೆ ಸರಿ. ನಮ್ಮ ತಾತ ಸದರಿ ರಸ್ತೆಗೆ ಹೋದ ಜಮೀನಿನ ಪರಿಹಾರ ಪಡೆದಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸರ್ವೆ ನಂಬರ ೭೮ ರ ಕುರಿತು ಪರಿಹಾರದ ಹಣವನ್ನು ಶರಣಪ್ಪರವರ ಪಡೆದಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

೨. ೧೯೯೫ ರಿಂದ ೨೦೦೦ ನೇ ಇಸವಿಯಲ್ಲಿ ಸದರಿ ರಸ್ತೆ ಅಗಲೀಕರಣ ಆಗಿ ಅದರ ಪರಿಹಾರವನ್ನೂ ಕೂಡಾ ನಾನು ಮತ್ತು ನನ್ನ ತಂದೆ ಪಡೆದಿರುತ್ತೇವೆ ಎಂದರೆ ಸರಿಯಲ್ಲ. ಪೀರಪ್ಪರವರು ವಿಭಾಗ ಮಾಡಿ ತಮ್ಮ ಮಕ್ಕಳಿಗೆ ಜಮೀನು ನೀಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ೧೯೮೮ ರಲ್ಲಿ ನಮ್ಮ ತಾತ ಓ ಎಸ್ ನಂಬರ ೧೧/೧೯೭೮ ದಾವೆ ಹಾಕಿದ್ದರು ಎಂದರೆ ನನಗೆ ಗೊತ್ತಿಲ್ಲ. ಶರಣಪ್ಪರವರಿಗೆ ೧೧ ಎಕರೆ ೨೭ ಗುಂಟೆ ಜಮೀನು ಇರುತ್ತದೆ ಎಂದು ಅದರಲ್ಲಿ ತಿಳಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ದಾವೆ ವಜಾಗೊಂಡಿರುತ್ತದೆ ಎಂದರೆ ನನಗೆ ಗೊತ್ತಿಲ್ಲ.

೩. ನಮ್ಮ ತಾತ ಸಹದೇವಪ್ಪ ಮಾನ್ಯ ಜಿಲ್ಲಾ ನ್ಯಾಯಾಲಯಕ್ಕೆ ಮತ್ತು ಉಚ್ಚನ್ಯಾಯಾಲಯಕ್ಕೆ ಹಾಕಿದ ಅಪೀಲ್ ಗಳು ಕೂಡಾ ವಜಾಗೊಂಡಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ವಾದಿಗಳು ೧೧ ಎಕರೆ ೨೭ ಗುಂಟೆ ಜಮೀನಿನ ಸ್ವಾಧೀನದಲ್ಲಿ ಇರುತ್ತಾರೆ ಮತ್ತು ದಿನಾಂಕ 20-03-2022 ರಂದು ನಾವು ಅವರ ಸ್ವಾಧೀನವನ್ನು ಬಿಡಿಸುವ ಪ್ರಯತ್ನ ಮಾಡಿರುತ್ತೇವೆ ಎಂದರೆ ಸರಿಯಲ್ಲ. ವಾದಿಯರಿಗೆ ನಾವು ಹೊಡೆ-ಬಡೆ ಮಾಡಿದ್ದರಿಂದ ನಮ್ಮ ಮೇಲೆ ರೇವೂರ ಪೋಲಿಸ್ ಠಾಣೆಯಲ್ಲಿ ಅವರು ದೂರು ನೀಡಿದ್ದರು ಎಂದರೆ ಸರಿಯಲ್ಲ. ನನ್ನ ಮತ್ತು ನನ್ನ ಸಹೋದರನ ಮೇಲೆ ಸದರಿ ಕ್ರಿಮಿನಲ್ ಕೇಸು ನಡೆದಿರುತ್ತದೆ ಎಂದರೆ ಸರಿ.

ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು, ಸಮಯಾವಕಾಶ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಅದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಅಫಜಲಪೂರ.